ಶಿಕ್ಷಕರನ್ನು ಸ್ವಂತ ತಾಲ್ಲೂಕಿನಿಂದ ಬೇರೆ ತಾಲ್ಲೂಕಿಗೆ ವರ್ಗವಣೆ ಮಾಡುವ ಕುರಿತಂ.

೮೪೪. ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದವರು ಉಪಾಧ್ಯಾಯರನ್ನು ಸ್ವಂತ ತಾಲ್ಲೂಕಿನಿಂದ ಬೇರೆ ತಾಲ್ಲೂಕಿಗೆ ವರ್ಗಾಯಿಸುವ ಯೋಜನೆ ಇರುವುದು ನಿಜವೆ ?

ಆ) ಈ ಬಗ್ಗೆ ಸರ್ಕಾರದವರ ನೀತಿಯನ್ನು ಉಪಾಧ್ಯಯ ಸಮೂಹ ಸಾಮೂಹಿಕವಾಗಿ ಪ್ರತಿಭಟಿಸಿರುತ್ತಿಲ್ಲವೆ. ಯಾರೊಬ್ಬ ಉಪಾಧ್ಯಯ ತಪ್ಪುದಾರಿಗೆ ಇಳಿದಿದ್ದಾನೆಂದು ಸಾಮೂಹಿಕವಾಗಿ ಉಪಾಧ್ಯಯರನ್ನೆಲ್ಲಾ ತಾಲ್ಲೂಕಿನಿಂದ ತಾಲ್ಲೂಕಿಗೆ ಬದಲಾಯಿಸುವುದು ನ್ಯಾಯವೇ ?

ಇ) ಸರ್ಕಾರದವರು ಈ ಯೋಜನೆಯನ್ನು ಪುನರ್ ವಿಮರ್ಶಿಸಿ ಈ ನಿಲುವನ್ನು ಬದಲಾಯಿಸುವ ಯೋಜನೆ ಮಾಡುವರೇ ?

ಶ್ರೀ ಹೆಚ್. ಜಿ. ದೇವೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ನಿಜ.

ಆ) ಹೌದು. ಇದು ಸರ್ಕಾರದ ನೀತಿ.

ಇ) ಪುನರ್ ವಿಮರ್ಶೆ ಅವಶ್ಯವಿರುವುದಿಲ್ಲ. ಅಗತ್ಯತೆ ಕಂಡು ಬಂದ ಪ್ರಕರಣಗಳು ಪರಿತೀಲಿಸಲಾಗುವುದು.

ಜಮಖಂಡಿ ಮತ್ತು ಬೀಳಗಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಶಾಲೆಗಳ ಬಗ್ಗೆ.

೧೧೪೩. ಶ್ರೀ ಬಾಬುರೆಡ್ಡಿ ವಿ. ತುಂಗಳ (ಬೀಳಗಿ).—ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕು ೩೫ ಹಳ್ಳಿಗಳನ್ನೊಳಗೊಂಡ ಬೀಳಗಿ ಕ್ಷೇತ್ರದಲ್ಲಿ ಸದ್ಯಕ್ಕೆ ಅಸ್ತಿತ್ವದಲ್ಲಿರುವ ಗ್ರಾಮಾಂತರ ಪಶುವೈದ್ಯ ಶಾಲೆಗಳು ಎಷ್ಟು, ವಿವರ ಒದಗಿಸುವುದು ?

ಆ) ನೀರಾವರಿಯ ಈ ಕ್ಷೇತ್ರದ ಪಶುಗಳ ಸಂಖ್ಯೆಯನ್ನು ಲಕ್ಷಿಸಿ ಇಲ್ಲಿ ಈ ವರ್ಷ ಮತ್ತಷ್ಟು ಪಶುವೈದ್ಯ ಶಾಲೆಗಳನ್ನು ಆರಂಭಿಸುವ ಆಲೋಚನೆಯೇನಾದರೂ ಇದೆಯೇ ?

ಇ) ಹಾಗಿದ್ದಲ್ಲಿ ಈ ದಿಕ್ಕೆಯಲ್ಲಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳು ಏನು ?

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನೆ ಮತ್ತು ಪಶುವೈದ್ಯ ರಾಜ್ಯ ಸಚಿವರು).—

ಅ) ಜಮಖಂಡಿ ತಾಲ್ಲೂಕಿನ ಬೀಳಗಿ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಗ್ರಾಮಾಂತರ ಪಶುವೈದ್ಯ ಶಾಲೆಗಳು ಎರಡು (೨)

೧ ಗ್ರಾಮಾಂತರ ಪಶುವೈದ್ಯ ಶಾಲೆ, ಕುಂದರ್ಗಿ
೨ ಗ್ರಾಮಾಂತರ ಪಶುವೈದ್ಯ ಶಾಲೆ, ಬಿದರಿ

ಆ) ಈ ವರ್ಷದಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಹೊನ್ನಾವರ ತಾಲ್ಲೂಕಿನ ಕೇಂದ್ರ ಪಶು ಚಿಕಿತ್ಸಾಲಯ ಕಟ್ಟಡ ಕುರಿತಂ.

೯೬೨. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೇಂದ್ರ ಪಶು ಚಿಕಿತ್ಸಾಲಯ ಕಟ್ಟಡ ಮತ್ತು ನಿವೇಶನ ಯಾವ ಸಾಲಿನಲ್ಲಿ ಹೊನ್ನಾವರ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಒಡೆತನದಲ್ಲಿರುವ ಕಟ್ಟಡದಲ್ಲಿ ನಡೆಸಲ್ಪಟ್ಟಿದೆ ?

ಅ) ಆಗಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮಂತ್ತು ಸದಸ್ಯರೇ ಆ ಕಟ್ಟಡವನ್ನು ಪಶುಸಂಗೋಪನಾ ಖಾತೆಗೆ ಹಸ್ತಾಂತರಿಸಿ ಕೊಡುವ ಬಗ್ಗೆ ತರಾವು ಮಾಡಿದ್ದರೆ ?

ಆ) ಹಾಗೆ ತರಾವು ಇದ್ದಾಗ ಪಶುಸಂಗೋಪನಾ ಇಲಾಖೆಗೆ ಯಾಕೆ ಹಸ್ತಾಂತರಿಸಿಲ್ಲ ?

ಈ) ಕೊಡಲೇ ಹಸ್ತಾಂತರಿಸಲು ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು) —

ಅ) ೧೯೬೦-೬೧ನೇ ಸಾಲಿನಲ್ಲಿ.

ಆ) ಹೌದು.

ಇ) ಈ ಬಗ್ಗೆ ಮಾಹಿತಿ ಇಲ್ಲ.

ಈ) ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸುವ ವಿಷಯದಲ್ಲಿ ಪರಿಶೀಲಿಸಿ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಚಿಕ್ಕಮಗಳೂರು ಗುಡ್ಡಗಾಡು ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆ.

೧೭೦೫. ಐ. ಬಿ. ಶಂಕರ (ಚಿಕ್ಕಮಗಳೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಗುಡ್ಡಗಾಡು ಪ್ರದೇಶಗಳಲ್ಲಿ ಹರಿಯುವ ಝರಿ ಹಳ್ಳ ತೊರೆಗಳ ನೀರನ್ನು ಕುಡಿಯಲು ಉಪಯೋಗಿಸಿ ಕೊಳ್ಳಬಹುದಾದ ವಿಚಾರ ಸರ್ಕಾರದವರ ಗಮನದಲ್ಲಿದೆಯೆ ?

ಆ) ಹಾಗಿದ್ದಲ್ಲಿ ಎತ್ತರ ಪ್ರದೇಶಗಳಲ್ಲಿ ಹರಿಯುವ ನೀರನ್ನು ಕುಡಿಯಲು ಸರಬರಾಜು ಮಾಡದಿರುವುದಕ್ಕೆ ಕಾರಣವೇನು ?

ಇ) ಹೆಚ್ಚು ವೆಚ್ಚವಿಲ್ಲದೇ ಗ್ರಾಮಾಂತರ ಪ್ರದೇಶಗಳಿಗೆ ನಲ್ಲಿಗಳಲ್ಲಿ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ಕೈಗೊಂಡು ತ್ವರಿತವಾಗಿ ಪೂರ್ತಿಗೊಳಿಸಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು).—

ಅ) ಇದೆ.

ಆ) ಝರಿ, ಹಳ್ಳ ಮತ್ತು ತೊರೆಗಳಲ್ಲಿ ಹರಿಯುವ ನೀರನ್ನು ಜಲಮೂಲವಾಗಿ ಪರಿಗಣಿಸುವ ಮುಂಚೆ ಆಲ್ಲಿಯ ಅವಲಂಬಿಸಬಹುದಾದ ನೀರಿನ ಉತ್ಪನ್ನವನ್ನು ಅಳೆಯಬೇಕು, ಮತ್ತು ಆರೋಗ್ಯ ಕಂಟಕಗಳನ್ನು ತಪ್ಪಿಸುವ ದೃಷ್ಟಿಯಿಂದ ನೀರಿನ ಪಟ್ಟವನ್ನು ರಾಸಾಯನಿಕ ಹಾಗೂ ಅಣುಜೀವಿ (ಬ್ಯಾಕ್ಟೀರಿಯಾಜಿಕಲ್) ಪರೀಕ್ಷೆಗೆ ದೀರ್ಘಕಾಲ ಒಳಪಡಿಸಿ ಮುಂದುವರೆಯಬೇಕು. ಈ ದಿಸೆಯಲ್ಲಿ ಪ್ರಯೋಗಾರ್ಥವಾಗಿ ಕೆಲವು ಯೋಜನೆಗಳನ್ನು ನಿಯೋಜಿಸಲಾಗುತ್ತಿದೆ.

ಇ) ಹೆಚ್ಚು ವೆಚ್ಚವಿಲ್ಲದೆ ಕಿರುನೀರು ಸರಬರಾಜು ಯೋಜನೆಗಳನ್ನು ವಿವಿಧ ಕಾರ್ಯಕ್ರಮಗಳಲ್ಲಿ ತ್ವರಿತವಾಗಿ ಪೂರ್ತಿಗೊಳಿಸಲಾಗುತ್ತಿದೆ.

Number of State Awards granted to Teachers during present Government.

1645. SRI P. C. MUNISWAMAIAH (Devanahalli).—Will the Minister for Education be pleased to State ?

a) Number of State Awards granted to Teachers duirng present Government ?